ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ

**KARNATAKA LEGISLATIVE ASSEMBLY, RESEARCH AND REFERENCE BRANCH**

## ಪತ್ರಿಕಾ ತುಣುಕುಗಳು
## PAPER CLIPPINGS

ಇಲಾಖೆ / ವಿಷಯ : DEPARTMENT / SUBJECT: ಕಾಮಗಾರಿ

ಪತ್ರಿಕೆಯ ಹೆಸರು : NAME OF THE NEWS PAPER: ಉದಯವಾಣಿ

ದಿನಾಂಕ : DATE : 23/11/20

# ಪ್ರವಾಹ: 1812 ಕೋಟಿ ಬಳಕೆ

ಮುದ್ದೇಬಿಹಾಳ: ಉತ್ತರ ಕರ್ನಾಟಕದ 9 ಜಿಲ್ಲೆಗಳಲ್ಲಿ 2020-21ನೇ ಸಾಲಿನಲ್ಲಿ ಪ್ರವಾಹದಿಂದಾಗಿರುವ ಹಾನಿ ಸರಿಪಡಿಸಲು 1,237 ಕಾಮಗಾರಿಗಳಿಗಾಗಿ ಲೋಕೋಪಯೋಗಿ ಇಲಾಖೆಯಿಂದ 1,812 ಕೋಟಿ ಅನುದಾನ ಬಳಸಲಾಗಿದೆ ಎಂದು ಉಪಮುಖ್ಯಮಂತ್ರಿ, ಲೋಕೋಪಯೋಗಿ ಸಚಿವ ಗೋವಿಂದ ಕಾರಜೋಳ ಹೇಳಿದ್ದಾರೆ.



ಇಲ್ಲಿನ ದಾಸೋಹ ನಿಲಯದಲ್ಲಿ ಭಾನುವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ರಾಜ್ಯಹೆದ್ದಾರಿಗಳ 189 ಕಾಮಗಾರಿಗಾಗಿ 483 ಕೋಟಿ ರೂ., ಮುಖ್ಯ ಹೆದ್ದಾರಿಗಳ 566 ಕಾಮಗಾರಿಗಾಗಿ 985 ಕೋಟಿ ರೂ., 54 ಸರ್ಕಾರಿ ಕಟ್ಟಡಗಳ ದುರಸ್ತಿಗೆ 16 ಕೋಟಿ ರೂ. ಖರ್ಚು ಮಾಡಲಾಗಿದೆ. ಒಟ್ಟಾರೆ ರಾಜ್ಯಾದ್ಯಂತ ತುರ್ತು ಕೆಲಸಗಳಿಗೆ ಹೆಚ್ಚುವರಿಯಾಗಿ 600 ಕೋಟಿ ರೂ. ಬಿಡುಗಡೆ ಮಾಡಲಾಗಿದೆ. 2019-20ನೇ ಸಾಲಿನಲ್ಲಿ ಪ್ರವಾಹದಿಂದ ಪಿಡಬ್ಲ್ಯುಡಿ 7000 ಕೋಟಿ ರೂ. ಸೇರಿ ವಿವಿಧ ಇಲಾಖೆಗಳ ಒಟ್ಟಾರೆ 35000 ಕೋಟಿ ರೂ. ಹಾನಿ ಆಗಿತ್ತು. 2020-21ನೇ ಸಾಲಿನಲ್ಲಿ ಮತ್ತೆ ಪ್ರವಾಹದಿಂದ ಪಿಡಬ್ಲ್ಯುಡಿಯ 3500 ಕೋಟಿ ಸೇರಿ ಮತ್ತೆ 25000 ಕೋಟಿ ನಷ್ಟ ಅನುಭವಿಸಬೇಕಾಯಿತು ಎಂದರು.

ಇದರ ಜತೆಗೆ ಕಳೆದ 11 ತಿಂಗಳಿಂದ ಕೊರೊನಾ ಅಪ್ಪಳಿಸಿ ದೊಡ್ಡ ಸಂಕಷ್ಟ ಎದುರಾಗಿದೆ. ಇದರಿಂದ ರಾಜ್ಯದ ಆರ್ಥಿಕ ಸ್ಥಿತಿಗತಿ ಚೆನ್ನಾಗಿಲ್ಲ, ಆದರೂ ಸಿಎಂ ಯಡಿಯೂರಪ್ಪನವರು ಎಲ್ಲ ಕಾರ್ಯಕ್ರಮಗಳನ್ನು ಮುಂದುವರಿಸಿಕೊಂಡು ಹೋಗುತ್ತಿದ್ದಾರೆ. ಕೇಂದ್ರ ಸರ್ಕಾರವು ಎನ್‌ಡಿಆರ್‌ಎಫ್, ಎಸ್‌ಡಿಆರ್‌ಎಫ್ ಗೈಡ್‌ಲೈನ್ಸ್ ಕೆಳಗಡೆ ಪರಿಹಾರ ಹಣ ಬಿಡುಗಡೆ ಮಾಡುತ್ತದೆ. ಒಟ್ಟು ಹಾನಿಯಲ್ಲಿ ಶೇ.20 ಕೇಂದ್ರ, ಶೇ.80 ರಾಜ್ಯ ಭರಿಸಬೇಕು. ಗೈಡ್‌ಲೈನ್ಸ್ ಅನ್ವಯ ಮೋದಿ ಸರ್ಕಾರ ಅತಿ ಹೆಚ್ಚು ಹಣ ಕೊಟ್ಟಿದೆ. ಟೀಕೆಗೋಸ್ಕರ ಟೀಕೆ ಮಾಡುವವರನ್ನು ಪರಿಗಣಿಸಲ್ಲ. ಕೇಂದ್ರದಿಂದ ಈ ವರ್ಷ ರಾಜ್ಯಕ್ಕೆ ಮೊದಲ ಕಂತಿನ ಹಣ 577 ಕೋಟಿ ರೂ. ಬಂದಿದ್ದು, ಇನ್ನೂ ಬರಲಿದೆ ಎಂದರು.

ಡಿ.5ರ ಬಂದ್ ಕೈಬಿಡಿ: ಮರಾಠ ನಿಗಮಕ್ಕೆ ಆಕ್ಷೇಪ ವ್ಯಕ್ತಪಡಿಸಿ ಕನ್ನಡಪರ ಸಂಘಟನೆಗಳು ಕರೆ ನೀಡಿರುವ ಡಿ.5ರ ಬಂದ್ ಕೈಬಿಡಬೇಕು. 40 ವರ್ಷಗಳ ಹಿಂದೆಯೇ ಬಸವಣ್ಣನ ಜಯಂತಿ ಪ್ರಾರಂಭಿಸಿದ್ದೇ ಮಹಾರಾಷ್ಟ್ರದಲ್ಲಿ ಎನ್ನುವುದನ್ನು ಗಮನಿಸಬೇಕು. ನಿಗಮವು ಮರಾಠ ಭಾಷೆ ಅಭಿವೃದ್ಧಿ ನಿಗಮ ಅಲ್ಲ, ಅದು ಮರಾಠರ ಅಭಿವೃದ್ಧಿ ನಿಗಮ ಎನ್ನುವುದನ್ನು ಅರಿತುಕೊಳ್ಳಬೇಕು ಎಂದರು.